www.kvkraichur.com

email : kvkraichur@gmail.com
kvk.Raichur@icar.gov.in

ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ತ್ರೈಮಾಸಿಕ ವಾರ್ತಾಪತ್ರ

ಸಂಪುಟ : 17 | ಅಕ್ಟೋಬರ್–ಡಿಸೆಂಬರ್ 2017 | ಸಂಚಿಕೆ: 03

ಒಳ ಪುಟಗಳಲ್ಲಿ :

- ರೈತ ದಿನಾಚರಣೆ ಮತ್ತು ಕಿಸಾನ್ ಗೋಷ್ಠಿ
- ವಿಶ್ವ ಆಹಾರ ದಿನ ಮತ್ತು ಕೃಷಿ ಮಹಿಳಾ ದಿನಾಚರಣೆ
- ವಿಶ್ವ ಮಣ್ಣು ಆರೋಗ್ಯ ದಿನಾಚರಣೆ
- ಕೃಷಿ ಬೆಲೆ ಆಯೋಗದ ಯೋಜನೆಯ ಚಟುವಟಿಕೆಗಳು (ರೈತರ ಆರೋಗ್ಯ ತಪಾಸಣೆ)
- ಶೇಂಗಾ ಕದಿರಿ-೨ (ಏ-೨) ಬೆಳೆಯ ಕ್ಷೇತ್ರೋತ್ಸವ
- ಕೂರಿಗೆ ಭತ್ತದಲ್ಲಿ ಸಮಗ್ರ ಬೆಳೆ ನಿರ್ವಹಣೆ ಕ್ಷೇತ್ರೋತ್ಸವ
- ಕೃಷಿ ತಂತ್ರಜ್ಞಾನ ಸಪ್ತಾಹ

ಆತ್ಮೀಯರೆ,

ಪ್ರಸ್ತುತ ಜಿಲ್ಲೆಯಾದ್ಯಂತ ಸಜ್ಜೆ, ನವಣೆ, ತೊಗರಿ, ಹತ್ತಿ ಕೊಯ್ಲಿಗೆ ಬಂದು ರೈತರು ಸುಗ್ಗಿಯ ಸಂಭ್ರಮದಲ್ಲಿದ್ದಾರೆ. ಸರ್ಕಾರವೂ ರೈತರ ನೆರವಿಗೆ ಬಂದು ತೊಗರಿ ಕ್ವಿಂಟಾಲಿಗೆ 6000/– ರೂ. ಬೆಂಬಲ ಬೆಲೆ ಘೋಷಿಸಿರುವುದರಿಂದ ರೈತರು ಸಮಾಧಾನದ ನಿಟ್ಟುಸಿರು ಬಿಡುವಂತಾಗಿದೆ. ಈ ಹಂತದಲ್ಲಿ ರೈತರು ಬೆಳೆಯ ಮೌಲ್ಯವರ್ಧನೆಯತ್ತ ಗಮನ ಹರಿಸುವುದು ಒಳಿತು. ಸ್ಪೈರಲ್ ಗ್ರೇಡರ್ ಬಳಸಿ ಕಾಳುಗಳನ್ನು ವರ್ಗೀಕರಿಸಿ ಮಾರುವುದರಿಂದ ಹಾಗೂ ತೊಗರಿಯನ್ನು ಬೇಳೆ ಮಾಡಿ ಮಾರುವುದರಿಂದ ಹೆಚ್ಚಿನ ಲಾಭ ಪಡೆಯಬಹುದು. ಹಾಗೆಯೇ ಕೆಲದಿನಗಳ ಕಾಲ ಸಂಗ್ರಹಿಸಿಟ್ಟು ಇನ್ನೂ ಹೆಚ್ಚು ಬೆಲೆ ಬಂದಾಗ ಮಾರಾಟ ಮಾಡುವುದು ಇನ್ನೂ ಒಳ್ಳೆಯದು. ಈ ನಿಟ್ಟಿನಲ್ಲಿ ಗಮನ ಹರಿಸಿ ರೈತರು ನೆಮ್ಮದಿಯನ್ನು ಕಾಣುವಂತಾಗಲೆಂದು ಹಾರೈಸುತ್ತೇನೆ.

ಹಾಗೆಯೇ, ಕಡಲೆ ಬೆಳೆಯಲ್ಲಿ ವೈಜ್ಞಾನಿಕ ತಾಂತ್ರಿಕತೆಗಳನ್ನು ಅಳವಡಿಸಿ ಹೆಚ್ಚು ಇಳುವರಿ ಪಡೆಯಲು ಪಲ್ಸ್ ಮ್ಯಾಜಿಕ್ (Pulse Magic) ಬಳಕೆ, ಕೊಳೆರೋಗ ಬರದಂತೆ ಕಾರ್ಬನ್‌ಡೈಜಿಮ್ ರಾಸಾಯನಿಕವನ್ನು 1 ಗ್ರಾಂ/ಲೀ. ನೀರಿಗೆ ಬೆರಸಿ ಗಿಡದ ಬುಡಕ್ಕೆ ಸುರಿಯುವುದು ಇತ್ಯಾದಿಗಳನ್ನು ಅಳವಡಿಸಿಕೊಂಡು ಹೆಚ್ಚು ಇಳುವರಿ ಪಡೆಯಲು ರೈತರು ಯತ್ನಿಸಬೇಕು. ಆಗಾಗ ಕೃಷಿ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿ ಕಾಲಕಾಲಕ್ಕೆ ವೈಜ್ಞಾನಿಕ ಮಾಹಿತಿಗಳನ್ನು ಪಡೆಯಬೇಕೆಂದು ವಿನಂತಿಸುತ್ತೇನೆ.

ಆದಾಯ ವೃದ್ಧಿಯು ಇಂದಿನ ತುರ್ತು ಅಗತ್ಯವಾಗಿರುವುದರಿಂದ, ರೈತರು ಹೈನುಗಾರಿಕೆ, ತೋಟಗಾರಿಕೆ, ಅಣಬೆ ಉತ್ಪಾದನೆ, ಜೇನು ಸಾಕಾಣಿಕೆ, ಕುರಿ, ಕೋಳಿ ಸಾಕಾಣಿಕೆ ಮುಂತಾದ ಚಟುವಟಿಕೆಗಳನ್ನು ಅಳವಡಿಸಿಕೊಂಡು ಹೆಚ್ಚಿನ ಲಾಭ ಗಳಿಸುವುದರತ್ತ ಗಮನಹರಿಸಬೇಕಾಗಿದೆ.

ಇಂತಿ ತಮ್ಮ ನಂಬುಗೆಯ

ಡಾ. ಎಂ.ವಿ. ರವಿ

ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು

"ರೈತ ದಿನಾಚರಣೆ ಮತ್ತು ಕಿಸಾನ್ ಗೋಷ್ಠಿ"

ರೈತ ದಿನಾಚರಣೆ ಮತ್ತು ಕಿಸಾನ್ ಗೋಷ್ಠಿಯನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರು, ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು, ಕೃಷಿ ಇಲಾಖೆ, ತಾಲ್ಲೂಕು ಕೃಷಿಕ ಸಮಾಜ ರಾಯಚೂರು, ಆತ್ಮ ಯೋಜನೆ, ದೇವದುರ್ಗ, ಕರ್ನಾಟಕ ಕೃಷಿ ಬೆಲೆ ಆಯೋಗ, ಬೆಂಗಳೂರು ಮತ್ತು ಕೃಷಿ ತಂತ್ರಜ್ಞರ ಸಂಸ್ಥೆ, ರಾಯಚೂರು ಇವರ ಸಂಯುಕ್ತ ಆಶ್ರಯದಲ್ಲಿ ರಾಯಚೂರಿನ ಕೃಷಿ ವಿಜ್ಞಾನ ಕೇಂದ್ರದಲ್ಲಿ ದಿನಾಂಕ: 23–12–2017 ರಂದು ಆಯೋಜಿಸಲಾಗಿತ್ತು. ಪ್ರಾರ್ಥನೆ ಮತ್ತು ರೈತಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ. ಎಂ. ವಿ ರವಿಯವರು ಸಮಾರಂಭದ ಎಲ್ಲಾ ಗಣ್ಯರನ್ನು ರೈತರುಗಳನ್ನು ಸ್ವಾಗತಿಸಿದರು. ಮಾನ್ಯ ಕುಲಪತಿಗಳಾದ ಡಾ. ಪಿ.ಎಂ. ಸಾಲಿಮಠರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಯಾಂತ್ರೀಕರಣದ ಅಗತ್ಯವಿರುವ ಈ ದಿನಗಳಲ್ಲಿ ರೈತರನ್ನೊಳಗೊಂಡ ಸಂಶೋಧನೆಗಳನ್ನು ಮಾಡಿದರೆ ಸಂಶೋಧನೆಗಳು ಅರ್ಥಪೂರ್ಣವಾಗುತ್ತವೆ. ಇಲ್ಲವಾದರೆ ಏಳೆಂಟು ವರ್ಷಗಳ ವಿಜ್ಞಾನಿಗಳ ಶಕ್ತಿ, ಶ್ರಮ, ಹಣ ಎಲ್ಲವೂ ವ್ಯರ್ಥವಾಗುತ್ತದೆ. ಹಾಗಾಗದಂತೆ ರೈತರನ್ನೊಳಗೊಂಡೇ ಅವರಿಗೆ ಉಪಯೋಗವಾಗುವಂತೆ ಸಂಶೋಧನೆಗಳನ್ನು ನಡೆಸಬೇಕು ಎಂದು ಹೇಳಿದರು ಮತ್ತು ಕಡಿಮೆ ಭೂಮಿಯಲ್ಲಿ ಹೆಚ್ಚು ಆದಾಯ ತರುವಂತಹ ತಾಂತ್ರಿಕತೆಗಳನ್ನು ರೈತರು ಅಳವಡಿಸಿಕೊಳ್ಳಬೇಕೆಂದರು. ಡಾ. ಎಸ್. ಕೆ. ಮೇಟಿ, ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಅವರು ಮಾತನಾಡಿ ರೈತರು ಕೃಷಿ ವಿಜ್ಞಾನ ಕೇಂದ್ರಕ್ಕೆ ಬರುತ್ತಾ ಇರಬೇಕು, ಮನಸ್ಸು ಮಾಡಿದರೆ ರೈತ ಎಲ್ಲವೂ ಆಗಬಲ್ಲ ಎಂದು ಹೆಳಿದರು. ಡಾ. ಎಂ. ಕಿರಣಕುಮಾರ, ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರಾಯಚೂರು ಅವರು ಮಾತನಾಡಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಉತ್ಪಾದನೆ ಮಾಡುವ ತಾಂತ್ರಿಕತೆಗಳನ್ನು ನೀಡುತ್ತಿದ್ದೇವೆ ರೈತರು ಸದುಪಯೋಗ ಮಾಡಿಕೊಳ್ಳಬೇಕು ಎಂದರು. ಇದೇ ತಿಂಗಳು 24 ರಿಂದ 25 ರವರೆಗೆ ನಡೆಯುವ ಸಿರಿಧಾನ್ಯ ಮತ್ತು ಸಾವಯವ ಮೇಳಕ್ಕೆ ಎಲ್ಲರನ್ನೂ ಆಹ್ವಾನಿಸುತ್ತಾ ರೈತರ ಒಳಿತಿಗೆ ಸಂಕಲ್ಪ ಮಾಡೋಣ ಎಂದರು. ಅಧ್ಯಕ್ಷರು, ತಾಲೂಕು ಕೃಷಿಕ ಸಮಾಜ, ರಾಯಚೂರು ಮತ್ತು ಅಧ್ಯಕ್ಷರು, ಕೃಷಿ ತಂತ್ರಜ್ಞರ ಸಂಸ್ಥೆ, ರಾಯಚೂರು, ಶ್ರೀ ಎಸ್. ಎಮ್. ಸಿದ್ದರೆಡ್ಡಿ ಇವರು ಮಾತನಾಡಿ ರೈತರ ಅನೇಕ ಪ್ರಸ್ತುತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದರು ಮತ್ತು ರೈತರ ಸಹಕಾರ ಹಾಗೂ ಕಂಪನಿ ಮಾಡುವುದರ ಮುಖಾಂತರ ಹೇಗೆ ಪರಿಹಾರ ಕಂಡುಕೊಳ್ಳಬಹುದೆಂದು ಹೇಳಿದರು. ಡಾ. ಬಸವೇಗೌಡ ವಿಶೇಷ ಅಧಿಕಾರಿ (ಬೀಜ ಘಟಕ), ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇವರು ಮಾತನಾಡಿ ಕೃಷಿ ಮಾಡುವ ಕಲೆಯನ್ನು ರೈತರು ರೂಢಿಸಿಕೊಳ್ಳಬೇಕೆಂದರು. ಡಾ. ಐ. ಶಂಕರಗೌಡ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇವರು ಮಾತನಾಡಿ ರೈತರು ಸಂಘಟಿತರಾಗಬೇಕು, ಕೃಷಿ ಕೂಲಿಕಾರರ ಅಭಾವದ ಈ ದಿನಗಳಲ್ಲಿ ಯಾಂತ್ರೀಕರಣದ ಅಗತ್ಯವಿದೆ. ಎಕರೆಗೆ 10 ಸಾವಿರ ಉಳಿಸುವ ಭತ್ತದ ನೇರ ಕೂರಿಗೆ ಬಿತ್ತನೆಯಂತಹ ತಂತ್ರಜ್ಞಾನಗಳನ್ನು ರೈತರು ಅಳವಡಿಸಿಕೊಳ್ಳಬೇಕೆಂದರು. ಡಾ. ಅನುಪಮ ಸಿ. ವಿಜ್ಞಾನಿ (ಗೃಹ ವಿಜ್ಞಾನ) ಕೃಷಿ ವಿಜ್ಞಾನ ಕೇಂದ್ರ,







ಕುರಬರ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ತೋಟಗಾರಿಕೆ ವಿಭಾಗ, ಕೃಷಿ ವಿಶ್ವವಿದ್ಯಾಲಯ, ರಾಯಚೂರು, ರೈತರೊಂದಿಗೆ ಸಂವಾದ ನಡೆಸಿದರು. ಉಪನಿರ್ದೇಶಕರು, ಕೃಷಿ ಇಲಾಖೆ, ರಾಯಚೂರು, ಶ್ರೀ ಅಶೋಕ್, ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಶ್ರೀಮತಿ. ಹೇಮಲತಾ, ಕೆ. ಜೆ., ಬೇಸಾಯ ಶಾಸ್ತ್ರ ವಿಜ್ಞಾನಿಯಾದ ಶ್ರೀಮತಿ ಶ್ವೇತ ಬಿ.ಎನ್. ಶ್ರೀಮತಿ ಸುಧಾ ಮಾಡಲಗೇರಿ, ಸಹಾಯಕ ಕೃಷಿ ನಿರ್ದೇಶಕರು, ದೇವದುರ್ಗ, ಕು. ಗೀತಾಂಜಲಿ ಮತ್ತು ಅನೇಕ ಮಾಧ್ಯಮ ಪ್ರತಿನಿಧಿಗಳು ಹಾಗೂ ವಿವಿಧ ಗ್ರಾಮಗಳಿಂದ ಆಗಮಿಸಿದ ಸುಮಾರು 200 ಕ್ಕೂ ಹೆಚ್ಚು ರೈತರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು.. ಕುರಬರ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ತೋಟಗಾರಿಕೆ ವಿಭಾಗ, ಕೃಷಿ ವಿಶ್ವವಿದ್ಯಾಲಯ, ರಾಯಚೂರು, ರೈತರೊಂದಿಗೆ ಸಂವಾದ ನಡೆಸಿದರು. ಉಪನಿರ್ದೇಶಕರು, ಕೃಷಿ ಇಲಾಖೆ, ರಾಯಚೂರು, ಶ್ರೀ ಅಶೋಕ್, ಕೇಂದ್ರದ ತೋಟಗಾರಿಕೆ ವಿಜ್ಞಾನಿಯಾದ ಶ್ರೀಮತಿ. ಹೇಮಲತಾ, ಕೆ. ಜೆ., ಬೇಸಾಯ ಶಾಸ್ತ್ರ ವಿಜ್ಞಾನಿಯಾದ ಶ್ರೀಮತಿ ಶ್ವೇತ ಬಿ.ಎನ್. ಶ್ರೀಮತಿ ಸುಧಾ ಮಾಡಲಗೇರಿ, ಸಹಾಯಕ ಕೃಷಿ ನಿರ್ದೇಶಕರು, ದೇವದುರ್ಗ, ಕು. ಗೀತಾಂಜಲಿ ಮತ್ತು ಅನೇಕ ಮಾಧ್ಯಮ ಪ್ರತಿನಿಧಿಗಳು ಹಾಗೂ ವಿವಿಧ ಗ್ರಾಮಗಳಿಂದ ಆಗಮಿಸಿದ ಸುಮಾರು 200 ಕ್ಕೂ ಹೆಚ್ಚು ರೈತರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಿದರು.

ಶೇಂಗಾ ಕದಿರಿ-9 (K-9) ಬೆಳೆಯ ಕ್ಷೇತ್ರೋತ್ಸವ

ರಾಷ್ಟ್ರೀಯ ಎಣ್ಣೆಕಾಳು ಹಾಗೂ ತಾಳೆ ಎಣ್ಣೆ ಭದ್ರತಾ ಯೋಜನೆ (NMOOP) ಅಡಿಯಲ್ಲಿ ಕದಿರಿ-9 (K-9) ಶೇಂಗಾ ತಳಿಯ ಕ್ಷೇತ್ರೋತ್ಸವವನ್ನು ಕೃಷಿ ವಿಜ್ಞಾನ ಕೆಂದ್ರ, ರಾಯಚೂರಿನ ವತಿಯಿಂದ ರಾಯಚೂರು ತಾಲೂಕು, ಯರಗುಂಟಾ ಗ್ರಾಮದಲ್ಲಿ ದಿನಾಂಕ: 22.12.2017 ರಂದು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕ್ಷೇತ್ರೋತ್ಸವವನ್ನು ಮಾಡುವ ಉದ್ದೇಶ, ಶೇಂಗಾ ಬೆಳೆಯಲ್ಲಿ ತಳಿಗಳ ಮಹತ್ವ, ಕದರಿ-9 ತಳಿಯ ವಿಶೇಷತೆಗಳು ಹಾಗೂ ರೈತನ ಆದಾಯ ವೃದ್ಧಿಸುವಲ್ಲಿ ಪಾಲಿಸಬೇಕಾದ ಕಡಿಮೆ ಖರ್ಚಿನ ತಂತ್ರಜ್ಞಾನಗಳನ್ನು ಕುರಿತು ಶ್ರೀಮತಿ ಶ್ವೇತಾ ಬಿ.ಎನ್ (ಬೇಸಾಯ ತಜ್ಞರು)ರವರು ಮಾಹಿತಿ ನೀಡಿದರು. ತೋಟಗಾರಿಕಾ ತಜ್ಞರಾದ ಶ್ರೀಮತಿ. ಹೇಮಲತಾ ಕೆ. ಜೆ. ಇವರು ಮೆಣಸಿನಕಾಯಿ ಬೆಳೆಯಲ್ಲಿ ಕಾಡುವ ರೋಗ ಮತ್ತು ಕೀಟಗಳ ನಿಯಂತ್ರಣಕ್ಕಾಗಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತಾಗಿ ಸಾಕಷ್ಟು ಮಾಹಿತಿಯನ್ನು ನೀಡಿದರು. ರಾಯಚೂರು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರಾದ ಡಾ. ರವಿ ಎಮ್.ವಿ. ರವರು ರೈತ ಬಾಂಧವರುಗಳು ಕಟಾವಾದ ನಂತರ ಉತ್ತಮ ತಳಿಯಾಗಿರುವ ಕದರಿ-9 (K-9) ಬೀಜವನ್ನು ಶೇಖರಿಸಿಕೊಂಡು ಮುಂದಿನ ಹಂಗಾಮಿಗೆ ಬಳಸುವುದರಿಂದ ಬೀಜಕ್ಕಾಗಿ ಪರದಾಡುವುದನ್ನು ತಪ್ಪಿಸಬಹುದೆಂದು ಹಾಗೂ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿಗೆ ಸಂಬಂಧಪಟ್ಟ ಎಲ್ಲಾ ವಿಜ್ಞಾನಿಗಳಿದ್ದು, ಅವರುಗಳ ಪ್ರಯೋಜನವನ್ನು ಪಡೆಯಬೇಕೆಂದು ತಿಳಿಯಪಡಿಸಿದರು. ಯೋಜನೆಯ ಫಲಾನುಭವಿ ರೈತರಾದ ಶರಣಪ್ಪನವರು ಕದರಿ-9 (K-9) ಶೇಂಗಾ ತಳಿಯ ಗುಣಗಳನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಯರಗುಂಟಾ ಗ್ರಾಮದ ಸುಮಾರು 70 ಜನ ರೈತರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.





ವಿಶ್ವ ಆಹಾರ ದಿನ ಮತ್ತು ಕೃಷಿ ಮಹಿಳಾ ದಿನಾಚರಣೆ

ದಿನಾಂಕ 16.10.2017 ರಂದು ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನಲ್ಲಿ ವಿಶ್ವ ಆಹಾರ ದಿನ ಮತ್ತು ಕೃಷಿ ಮಹಿಳಾ ದಿನಾಚಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಮಾನವಿ ತಾಲೂಕಿನ ಪೋತ್ನಾಳ ಗ್ರಾಮದ "ಚಿಗುರು ಮಹಿಳಾ ಸ್ವಸಹಾಯ ಸಂಘ"ದ ಮುಂದಾಳತ್ವವನ್ನು ವಹಿಸಿದ ಶ್ರೀಮತಿ ಲಕ್ಷ್ಮೀ ಹಾಗೂ ಸಂಘದ ಇತರೆ 9 ಮಹಿಳಾ ಸದಸ್ಯರಿಗೆ ಅವರ ಟೆರ್ರಕೋಟಾ ಆಭರಣ ತಯಾರಿಕೆಯ ಕೌಶಲ್ಯವನ್ನು ಗುರುತಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ವಿಸ್ತರಣಾ ನಿರ್ದೇಶಕರಾದ ಡಾ. ಎಸ್. ಕೆ. ಮೇಟಿ ರವರು, ಚಿಗುರು ಸಂಘದ ಸದಸ್ಯರಿಗೆ ಇನ್ನಷ್ಟು ಹೆಚ್ಚಿನ ತರಬೇತಿಯನ್ನು ಕೊಡಿಸುವಂತೆ ತಿಳಿಸಿದರು. ನಂತರ ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನ, ಡಾ. ಅನುಪಮಾ, ಸಿ. ವಿಜ್ಞಾನಿ (ಗೃಹ ವಿಜ್ಞಾನ) ಅವರು ಸದ್ಯದ ಮಹಿಳೆಯರ ಸ್ಥಿತಿಗತಿಗಳನ್ನು ಕುರಿತು ಮಾತನಾಡಿ, ಸ್ತ್ರೀ ಸಬಲೀಕರಣ ನಮ್ಮ ದೇಶದಲ್ಲಿ ತುಂಬ ಅವಶ್ಯಕತೆಯಿದ್ದು, ಕಾರ್ಯಕ್ರಮದಲ್ಲಿ ನೆರೆದಿದ್ದ ಸ್ವಸಹಾಯ ಗುಂಪಿನ ಮಹಿಳೆಯರಿಗೆ ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕೆಂದು ತಿಳಿಸಿದರು. ಡಾ. ಎಂ. ವಿ. ರವಿ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು ಕೃಷಿ ವಿಜ್ಞಾನ ಕೇಂದ್ರ, ರಾಯಚೂರು, ವಿಶ್ವ ಆಹಾರ ದಿನದ ಪ್ರಾಮುಖ್ಯತೆಯನ್ನು ತಿಳಿಯಪಡಿಸಿದರು. ಕಡಿಮೆ ಖರ್ಚಿನಿಂದ ಆದಾಯ ಪಡೆಯುವಲ್ಲಿ ಜೇನು ಸಾಕಾಣಿಕೆಯು ಸಹಕಾರಿಯಾಗವುದೆಂದು ಬದರಿಪ್ರಸಾದ್ ಪಿ. ಆರ್ ವಿಜ್ಞಾನಿ (ಕೀಟ ಶಾಸ್ತ್ರ) ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ತಿಳಿಸಿಕೊಟ್ಟರು. ಶ್ರೀಮತಿ ಶ್ವೇತ ಬಿ. ಎನ್. ವಿಜ್ಞಾನಿ (ಬೇಸಾಯ ಶಾಸ್ತ್ರ) ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ಇವರು ಕಾರ್ಯಕ್ರಮವನ್ನು ನಿರೂಪಿಸಿದರು ಹಾಗೂ ಡಾ. ಪ್ರಹ್ಲಾದ ಉಭಾಳೆ, ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ಇವರು ವಂದಿಸಿದರು





ಕೂರಿಗೆ ಭತ್ತದಲ್ಲಿ ಸಮಗ್ರ ಬೆಳೆ ನಿರ್ವಹಣೆ ಕ್ಷೇತ್ರೋತ್ಸವ

ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಕೂರಿಗೆ ಭತ್ತವನ್ನು ಉತ್ತೇಜಿಸುವ ಹಾಗೂ ಅದರಲ್ಲಿ ಸಮಗ್ರ ಬೆಳೆ ನಿರ್ವಹಣೆಯ ಮಾಹಿತಿಯನ್ನು ನೀಡುವ ಸಲುವಾಗಿ ದಿನಾಂಕ 01.12.2017 ರಂದು ಕೂರಿಗೆ ಭತ್ತದಲ್ಲಿ ಸಮಗ್ರ ಬೆಳೆ ನಿರ್ವಹಣೆ ಕ್ಷೇತ್ರೋತ್ಸವ ಕಾರ್ಯಕ್ರಮವನ್ನು ಮಾನ್ವಿ ತಾಲೂಕಿನ ಸಿರವಾರ ಗ್ರಾಮದಲ್ಲಿ ಶ್ರೀಯುತ ರಾಜಪ್ಪನವರ ಹೊಲದಲ್ಲಿ ಹಮ್ಮಿಕೊಳ್ಳಲಾಗಿತ್ತು. ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ನಾಟಿ ಭತ್ತವನ್ನು ಪ್ರತಿವರ್ಷವೂ ಬೆಳೆಯುತ್ತಿದ್ದು,

ಈ ಬಾರಿ ನೀರಿನ ಕೊರತೆಯ ಕಾರಣ ಹಲವಾರು ರೈತರು ಕೂರಿಗೆ ಬಿತ್ತನೆಯತ್ತ ಒಲವು ತೋರಿ ಭತ್ತವನ್ನು ಬಿತ್ತಿದ್ದಾರೆ. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಮಾನ್ವಿ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರಾದ ಡಾ. ನಜೀರ್ ಅಹಮದ್ ರವರು ಕೂರಿಗೆ ಭತ್ತದಿಂದ ಶೇ. 25 ರಷ್ಟು ನೀರಿನ ಉಳಿತಾಯವಾಗುವುದಲ್ಲದೇ ಮಣ್ಣಿನ ರಚನೆಯು ಹಾಳಾಗದೆ ಬೇರೆ ಬೆಳೆಗಳನ್ನು ಬೆಳೆಯಲು ಸಾಧ್ಯವಾಗುತ್ತದೆ. ಸಸಿ ಮಡಿಯ ಅವಶ್ಯಕತೆಯೂ ಇರುವುದಿಲ್ಲ, ನಾಟಿ ಹಚ್ಚಲು ಕೂಲಿ ಆಳುಗಳು ಸರಿಯಾದ ಸಮಯಕ್ಕೆ ಸಿಗುವುದಿಲ್ಲ ಜೊತೆಗೆ ನಾಟಿ ಮಾಡಲು ಪ್ರತಿ ಎಕರೆಗೆ ರೂ. 2500 ರಿಂದ 4000 ಗಳಷ್ಟು ಖರ್ಚಾಗುವುದು. ಮಳೆಗಾಲದಲ್ಲಿ ಮಳೆ ಪ್ರಾರಂಭವಾಗುವುದಕ್ಕೂ ಮೊದಲು ಭೂಮಿ ತಯಾರಾಗಿದ್ದರೆ ಬಿತ್ತನೆಯನ್ನು ಬೇಗ ಮಾಡುವುದರಿಂದ ಹಂಗಾಮಿನ ಸದುಪಯೋಗವಾಗುವುದು. ಇದರಿಂದ ಎರಡನೇ ಬೆಳೆಯನ್ನು ತೆಗೆಯಲು ಸಾಧ್ಯವಾಗುವುದು, ಮುಖ್ಯವಾಗಿ ಎಕರೆಗೆ 6000 ರಿಂದ 8000 ರೂ. ಗಳಷ್ಟು ಕಡಿಮೆ ಖರ್ಚಾಗುವುದು ಎಂದು ಕೂರಿಗೆ ಬಿತ್ತನೆಯ ಹಲವಾರು ಉಪಯೋಗಗಳನ್ನು ತಿಳಿಸುವುದರೊಂದಿಗೆ ಲಾಭದಾಯಕ ಕೃಷಿಗೆ ಕಡಿಮೆ ಖರ್ಚಿನ ಬೇಸಾಯ ಕ್ರಮಗಳು, ಮುಖ್ಯವಾಗಿ ಸಮಗ್ರ ಬೆಳೆ ನಿರ್ವಹಣೆ, ಸಾವಯವ ಗೊಬ್ಬರಗಳ ಬಳಕೆಯು ಯಾವ ರೀತಿ ಸಹಕಾರಿಯಾಗುತ್ತದೆ ಎಂಬುದನ್ನು ಹಾಗೂ ಕೃಷಿ ಇಲಾಖೆಯಿಂದ ರೈತರಿಗೆ ದೊರೆಯುವ ವಿವಿಧ ಸೌಲಭ್ಯಗಳ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ಅನುಪಮ ಸಿ. (ಗೃಹ ವಿಜ್ಞಾನ) ಕೃಷಿ ವಿಜ್ಞಾನ ಕೆಂದ್ರ, ರಾಯಚೂರು ಇವರು ರೈತರುಗಳು ಬೆಳೆಯನ್ನು ಬೆಳೆಯುದಕ್ಕಷ್ಟೇ ಮಹತ್ವವನ್ನು ಕೊಡದೆ ಕಟಾವಿನ ನಂತರದ ಮೌಲ್ಯವರ್ಧನೆ ಕಡೆಗೂ ಸಾಕಷ್ಟು ಗಮನ ಹರಿಸಿದರೆ ಹೆಚ್ಚಿನ ಲಾಭವನ್ನು ಪಡೆಯಬಹುದು ಎಂಬುದನ್ನು ಸವಿಸ್ತಾರವಾಗಿ ತಿಳಿಸಿದರಲ್ಲದೇ ರೈತರು ವಿವಿಧ ಬೆಳೆಗಳ ಗುಂಪುಗಳನ್ನು ಮಾಡಿ ಅದರ ಮೂಲಕವೇ ತಮ್ಮ ಉತ್ಪನ್ನಗಳನ್ನು ನೇರವಾಗಿ ಮಾರಾಟ ಮಾಡುವುದರಿಂದ ಉತ್ತಮವಾದ ಬೆಲೆಯನ್ನು ಪಡೆಯಲು ಸಾಧ್ಯವಾಗುತ್ತದೆ ಎಂಬುದನ್ನು ತಿಳಿಯಪಡಿಸಿದರು. ಕಾರ್ಯಕ್ರಮದ ನಿರೂಪಣೆ ಹಾಗೂ ಪ್ರಸ್ತಾವನೆಯನ್ನು ಶ್ರೀಮತಿ ಶ್ವೇತಾ ಬಿ.ಎನ್. (ಬೇಸಾಯ ಶಾಸ್ತ್ರ) ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಸಿರವಾರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸುಮಾರು 70 ಜನ ರೈತರು ಭಾಗವಹಿಸಿದ್ದರು.





"ವಿಶ್ವ ಮಣ್ಣು ಆರೋಗ್ಯ ದಿನಾಚರಣೆ"

ವಿಶ್ವ ಮಣ್ಣು ಆರೋಗ್ಯ ದಿನಾಚರಣೆಯನ್ನು ಕೃಷಿ ವಿಶ್ವವಿದ್ಯಾಲಯ, ರಾಯಚೂರು, ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು, ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ಶಾಸ್ತ್ರ ವಿಭಾಗ, ಕೃಷಿ ಮಹಾವಿದ್ಯಾಲಯ, ರಾಯಚೂರು, ಸುಜಲಾ–III ಜಲಾನಯನ ಯೋಜನೆ ಹಾಗೂ ಕೃಷಿ ಇಲಾಖೆ, ರಾಯಚೂರು, ಇವರ ಸಂಯುಕ್ತ ಆಶ್ರಯದಲ್ಲಿ ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ವಿಶ್ವ ಮಣ್ಣು ಆರೋಗ್ಯ ದಿನಾಚರಣೆಯನ್ನು ದಿನಾಂಕ: 05–12–2017 ರಂದು ಆಚರಿಸಲಾಯಿತು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಡಾ.ಎಂ.ವಿ ರವಿಯವರು ಸಮಾರಂಭದ ಎಲ್ಲಾ ಅಧಿಕಾರಿಗಳನ್ನು, ರೈತರುಗಳನ್ನು ಸ್ವಾಗತಿಸಿ ವಿಶ್ವ ಮಣ್ಣು ಆರೋಗ್ಯ ದಿನಾಚರಣೆಯ ಕಿರುಪರಿಚಯವನ್ನು ಮಾಡಿದರು. ಮಾನ್ಯ ಕುಲಪತಿಗಳಾದ ಡಾ. ಪಿ. ಎಂ.ಸಾಲಿಮಠ ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಸಾವಯವ ಗೊಬ್ಬರಕ್ಕೆ ರೈತರು ಹೆಚ್ಚು ಒತ್ತು ಕೊಡಬೇಕು, ಕೊಟ್ಟಿಗೆ ಗೊಬ್ಬರ ಮತ್ತು ಹಸಿರೆಲೆ ಗೊಬ್ಬರಗಳನ್ನು ಮಣ್ಣಿಗೆ ಬೆರೆಸಿ ಮಣ್ಣಿನ ಆರೋಗ್ಯವನ್ನು ಕಾಪಾಡಬೇಕು. ಮಣ್ಣಿನ ಆರೋಗ್ಯ ಸ್ಥಿತಿಯನ್ನು ತಿಳಿದು ಉತ್ತಮ ಫಲವತ್ತತೆ ಕಾಪಾಡಿದಲ್ಲಿ ರೈತರು ಸುಸ್ಥಿರವಾದ ಇಳುವರಿಯನ್ನು ಪಡೆಯಬಹುದು. ಒಟ್ಟು ಭಾರತದಲ್ಲಿ 10 ಕೋಟಿ ಮಣ್ಣು ಆರೋಗ್ಯ ಕಾರ್ಡುಗಳು ವಿತರಣೆಯಾಗಿದ್ದು ಕೃಷಿ ವಿಶ್ವವಿದ್ಯಾಲಯದಿಂದ 20 ಸಾವಿರ ಮಣ್ಣು ಆರೋಗ್ಯ ಕಾರ್ಡುಗಳನ್ನು ರೈತರಿಗೆ ಕೃಷಿ ಇಲಾಖೆಯ ಸಹಯೋಗದೊಂದಿಗೆ ವಿತರಿಸಲಾಗಿದೆ ಎಂದು ತಿಳಿಸಿದರು. ಇಂತಹ ಕಾರ್ಯಕ್ರಮಗಳಲ್ಲಿ ರೈತರು ಭಾಗವಹಿಸಿ ಸೂಕ್ತ ಮಾಹಿತಿಯನ್ನು ತಿಳಿದುಕೊಳ್ಳಬೇಕೆಂದು ತಮ್ಮ ಉದ್ಘಾಟನಾ ಭಾಷಣದಲ್ಲಿ ತಿಳಿಸಿದರು. ಕಾರ್ಯಕ್ರಮಕ್ಕೆ ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದ ಶ್ರೀಮತಿ ಕವಿತಾ ಮಿಶ್ರ, ಪ್ರಗತಿ ಪರ ರೈತಮಹಿಳೆ, ಕವಿತಾಳ, ಮಾನವಿ ತಾಲೂಕು ಇವರು ಮಾತನಾಡಿ ಕೃಷಿಯಲ್ಲಿ ತಮ್ಮ ಸುದೀರ್ಘ ಅನುಭವವನ್ನು ಹಂಚಿಕೊಂಡರು. ಬರಬರುತ್ತಾ ರೈತರು ಹೊಲ ಮಾರಾಟ ಮಾಡಿ, ಐದರಿಂದ ಹತ್ತು ಸಾವಿರ ರೂಪಾಯಿಗಳನ್ನು ದುಡಿಯಲು ನಗರಗಳಿಗೆ ಹೋಗುತ್ತಿದ್ದಾರೆ.

ಇದನ್ನು ತಪ್ಪಿಸಲು ಸಮಗ್ರ ಕೃಷಿ ಕೈಗೊಳ್ಳುವುದು ಉತ್ತಮ ಮಾರ್ಗವೆಂದು ತಿಳಿಸಿದರು. ತಮ್ಮ 8 ಎಕರೆ ಜಮೀನಿನಲ್ಲಿ 800 ಶ್ರೀಗಂಧ, 200 ದಾಳಿಂಬೆ, 350 ಪೇರಲ, 100 ಬಾರಿಗಿಡ, 100 ಸಾಗುವಾನಿ, 100 ಸಪೋಟ, 100 ತೆಂಗು, ಹೀಗೆ ಮರ ಗಿಡಗಳನ್ನು ಬೆಳೆಸುವುದರ ಜೊತೆಗೆ ತರಕಾರಿ ಕೃಷಿಯನ್ನು ಸತತವಾಗಿ ಮಾಡುತ್ತಾ ನಿರಂತರ ಆದಾಯ ಗಳಿಸುತ್ತಿದ್ದಾರೆ. ಜೊತೆಯಲ್ಲಿ ಕುರಿ, ಕೋಳಿ ಸಾಕಾಣಿಕೆ, ಹೈನುಗಾರಿಕೆ, ತೋಟಗಾರಿಕೆ ಸಸಿಗಳು, ಆರೋಗ್ಯಕರವಾದ ತಳಿಗಳ ಉತ್ಪಾದನೆ ಮಾಡುತ್ತಿದ್ದಾರೆ. ತಮ್ಮ ಬೆಳೆಗಳಿಗೆ ಸಾವಯವ ಗೊಬ್ಬರಗಳು, ಜೀವಾಮೃತ, ದಶಪರ್ಣಿ, ಅಗ್ನಾಸ್ತ್ರ ಇತ್ಯಾದಿ ನೈಸರ್ಗಿಕ ಒಳಸುರಿಗಳನ್ನು ಉತ್ಪಾದಿಸಿ ಬಳಸುತ್ತಾರೆ. ಹಸಿರೆಲೆ ಗೊಬ್ಬರದ ಮಹತ್ವವನ್ನು ವಿವರಿಸುತ್ತಾ ತಮ್ಮ ಜಮೀನಿನಲ್ಲಿ ಉದುರುವ ಎಲ್ಲಾ ಗಿಡಮರಗಳ ಎಲೆಗಳನ್ನು ಅಲ್ಲಲ್ಲಿಯೇ ಬಿಟ್ಟು ಕೊಳೆತು ಗೊಬ್ಬರವಾಗುವಂತೆ ನೊಡಿಕೊಳ್ಳುವುದನ್ನು ರೈತರಿಗೆ ಮನ ಮುಟ್ಟುವಂತೆ ವಿವರಿಸಿದರು. ಬೇರೆ ಬೇರೆ ಹಣ್ಣು ತರಕಾರಿಗಳನ್ನು ಕಾಲೋಚಿತವಾಗಿ ಯೋಜಿಸಿ ಪ್ರತಿ ತಿಂಗಳು ಆದಾಯ ಗಳಿಸುತ್ತಿದ್ದಾರೆ. ಹೀಗೆ ಅತಿಸಾಂದ್ರೀಕೃತ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡು ಲಾಭಗಳಿಸುತ್ತಿರುವುದನ್ನು ರೈತರೊಂದಿಗೆ ಹಂಚಿಕೊಂಡರು.

ಶ್ರೀ ಎಸ್.ಎನ್.ಉಪ್ಪೇರಿ ಕೃಷಿ ವಿಸ್ತರಣಾ ಮುಂದಾಳು ಮತ್ತು ಸಹ ಪ್ರಾಧ್ಯಾಪಕರು, (ನಿವೃತ್ತ) ಮಣ್ಣು ವಿಜ್ಞಾನ ವಿಭಾಗ, ರಾಯಚೂರು ಅವರು ತಮ್ಮ ವಿಶೇಷ ಉಪನ್ಯಾಸದಲ್ಲಿ ಮಣ್ಣಿನ ಆರೋಗ್ಯ ಕಾಪಾಡಲು ಅನೇಕ ಸೂಕ್ತ ಸಲಹೆಗಳನ್ನು ನೀಡಿದರು. ಮಣ್ಣಿನ ರಚನೆ ಸೂಕ್ಷ್ಮ ಜೀವಿಗಳ ಚಟುವಟಿಕೆ ಮತ್ತು ನೀರು ಇವುಗಳನ್ನು ಸರಿಯಾಗಿ ನಿರ್ವಹಣೆ ಮಾಡುವುದರಿಂದ ಮಣ್ಣಿನ ಆರೋಗ್ಯ ಚೆನ್ನಾಗಿ ಕಾಪಾಡಬಹುದೆಂದರು. ಟ್ರ್ಯಾಕ್ಟರ್ ಬಳಕೆಯಿಂದ ಭೂಮಿಯಲ್ಲಿ 25 ಸೇ.ಮೀ. ಆಳದಲ್ಲಿರುವ ಕೆಳಮಣ್ಣು ಗಟ್ಟಿಯಾಗಿಬಿಡುತ್ತದೆ. ಬೆಳೆಯುಳಿಕೆಗಳನ್ನು ಗೊಬ್ಬರ ಮಾಡಿಕೊಂಡು ಮಣ್ಣಿನ ಫಲವತ್ತತೆ ಕಾಪಾಡಬೇಕೆಂದರು. ಡಾ. ಐ. ಶಂಕರಗೌಡ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಇವರು ರಸಗೊಬ್ಬರಕ್ಕೆ ಪರ್ಯಾಯವಾಗಿ ತಿಪ್ಪೆಗೊಬ್ಬರ, ಎರೆ ಗೊಬ್ಬರ, ಹಸಿರೆಲೆ ಗೊಬ್ಬರ ಇತ್ಯಾದಿಗಳನ್ನು ಬಳಸಿ ಮಣ್ಣಿನ ಆರೋಗ್ಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದರು.

ಡಾ. ಎಸ್. ಕೆ. ಮೇಟಿ, ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ರಾಯಚೂರು ಅವರು ಮಾತನಾಡಿ ಮಣ್ಣಿಂದ ಕಾಯ ಮಣ್ಣಿಂದ ಹಾಗೂ ಕೋಟಿ ವಿದ್ಯೆಗಿಂತ ಮೇಟಿವಿದ್ಯೆಯೆ ಮೇಲು ಎಂದು ಹೇಳಿದರು. ಪಂಚೇಂದ್ರಿಯಗಳು ಹಾಗೂ ಪಂಚಭೂತಗಳಿಗಿರುವ ಅವಿನಾಭಾವ ಸಂಬಂಧವನ್ನು ವಿವರಿಸಿದರು. ಡಾ. ಎಂ. ಕರಣಕುಮಾರ, ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ರಾಯಚೂರು ಅವರು ಅಧ್ಯಕ್ಷೀಯ ಭಾಷಣ ಮಾಡಿ ಮಣ್ಣು ಆರೋಗ್ಯ ಕಾರ್ಡ್ ರೈತರಿಗೆ ಯಾವ ರೀತಿ ಉಪಯೋಗವಾಗುತ್ತದೆ ಎಂಬ ಮಾಹಿತಿಯನ್ನು ಹೇಳಿದರು. ನಂತರ ರೈತರಿಗೆ ಮಣ್ಣು ಆರೋಗ್ಯ ಕಾರ್ಡ್‌ನ್ನು ಕೃಷಿ ವಿಶ್ವ ವಿದ್ಯಾಲಯವು ಕೃಷಿ ಇಲಾಖೆಯ ಸಹಯೋಗದೊಂದಿಗೆ ವಿತರಿಸಲಾಯಿತು. ಡಾ. ಸತೀಶಕುಮಾರ, ಯು. ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಮಣ್ಣು ಮತ್ತು ನೀರು ತಂತ್ರಜ್ಞಾನ ವಿಭಾಗ, ರಾಯಚೂರು ಇವರು ವಂದನಾರ್ಪಣೆ ಅರ್ಪಿಸಿದರು. ಈ ಕಾರ್ಯಕ್ರಮದಲ್ಲಿ ರಾಯಚೂರು ಜಿಲ್ಲೆಯ ವಿವಿಧ ಭಾಗಗಳಿಂದ ಸುಮಾರು 625 ರೈತರು ಭಾಗವಹಿಸಿದ್ದರು





ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನಲ್ಲಿ ಕೃಷಿ ತಂತ್ರಜ್ಞಾನ ಸಪ್ತಾಹ-2017 (ಜೈ-ಕಿಸಾನ್ ಜೈ-ವಿಜ್ಞಾನ್ ಸಪ್ತಾಹ) ವನ್ನು ದಿನಾಂಕ: 04.12.2017 ರಿಂದ 09.12.2017 ವರೆಗೆ ಆಚರಿಸಲಾಯಿತು. ಈ ಕಾರ್ಯಕ್ರಮದಡಿಯಲ್ಲಿ ನಡೆಸಲಾದ ತರಬೇತಿಗಳು ಕೆಳಗಿನಂತಿವೆ :

ದಿನಾಂಕ	ವಿಷಯ	ತರಬೇತಿ ಸಂಘಟಕರು
04.12.2017	ಕೋಳಿ ಸಾಕಾಣಿಕೆ ತರಬೇತಿ ಕಾರ್ಯಕ್ರಮ	ಡಾ ಪ್ರಹ್ಲಾದ, ವಿಜ್ಞಾನಿ (ಪಶು ವಿಜ್ಞಾನ)
05.12.2017	ವಿಶ್ವ ಮಣ್ಣು ಆರೋಗ್ಯ ದಿನಾಚರಣೆ	ಡಾ. ಎಮ್.ವಿ.ರವಿ, ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು,
06.12.2017	ಸಮಗ್ರ ಕೃಷಿ ಪದ್ಧತಿಯಲ್ಲಿ ತೋಟಗಾರಿಕೆಯ ಪ್ರಾಮುಖ್ಯತೆ	ಶ್ರೀಮತಿ.ಕೆ.ಜೆ. ಹೇಮಲತಾ, ವಿಜ್ಞಾನಿ (ತೋಟಗಾರಿಕೆ)
07.12.2017	ಹಿಂಗಾರು ಬೆಳೆಗಳ ತಾಂತ್ರಿಕತೆಗಳು (ಹತ್ತಿ, ಜೋಳ ಮತ್ತು ಕಡಲೆ)	ಶ್ರೀಮತಿ .ಶ್ವೇತಾ ಬಿ.ಎನ್. ವಿಜ್ಞಾನಿ (ಬೇಸಾಯಶಾಸ್ತ್ರ)
08.12.2017	ವಿವಿಧ ಬೆಳೆಗಳಲ್ಲಿ ಕೀಟ ಮತ್ತು ರೋಗಗಳ ನಿರ್ವಹಣೆ ಹಾಗೂ ಜೀನು ಕೃಷಿ ಸಾಕಾಣಿಕೆಯ ಮಹತ್ವ	ಶ್ರೀ ಡಾ. ಬದರಿಪ್ರಸಾದ್ ಪಿ. ಆರ್. ವಿಜ್ಞಾನಿ (ಕೀಟ ಶಾಸ್ತ್ರ)
09.12.2017	ಅಣಬೆ ಉತ್ಪಾದನೆ ತರಬೇತಿ ಕಾರ್ಯಕ್ರಮ	ಶ್ರೀಮತಿ ಡಾ. ಅನುಪಮಾ ಸಿ, ವಿಜ್ಞಾನಿ (ಗೃಹ ವಿಜ್ಞಾನ)

ರೈತರಿಗೆ ಆರೋಗ್ಯ ತಪಾಸಣೆ ಕಾರ್ಯಕ್ರಮ

ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು, ಕೃಷಿ ಬೆಲೆ ಆಯೋಗ, ಬೆಂಗಳೂರು ಮತ್ತು ಕಸ್ತೂರಬಾ ಮೆಡಿಕಲ್ ಕಾಲೇಜು, ಮಣಿಪಾಲ ಇವರ ಸಂಯುಕ್ತ ಆಶ್ರಯದಲ್ಲಿ ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿ ಯೋಜನೆ ಕಾರ್ಯಕ್ರಮದ ಅಡಿಯಲ್ಲಿ ರೈತರ ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ದಿನಾಂಕ 23.10.2017 ರಂದು ಬೆಳಿಗ್ಗೆ:10.00 ಗಂಟೆಯಿಂದ ಸಾಯಂಕಾಲ 4.00 ಗಂಟೆವರೆಗೆ ಮಾನವಿ ತಾಲೂಕಿನ ಜಕ್ಕಲದಿನ್ನಿ ಗ್ರಾಮದಲ್ಲಿ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಇಲಾಖೆ, ಹಾಗೂ ರಾಯಚೂರಿನ ವಿವಿಧ ಆಸ್ಪತ್ರೆಗಳಾದ ಎಂ. ಕೆ. ಭಂಡಾರಿ ಆಸ್ಪತ್ರೆ, ರಾಜೀವ್ ಗಾಂಧಿ ಒಪೆಕ್, ದೃಷ್ಟಿ ಕಣ್ಣಿನ ಆಸ್ಪತ್ರೆ, ಬಾಲಂಕು ಆಸ್ಪತ್ರೆಗಳ ವೈದ್ಯರು ಭಾಗವಹಿಸಿ ರೈತರಿಗೆ ಉಚಿತವಾಗಿ ರಕ್ತ ಪರೀಕ್ಷೆ, ಮಧುಮೇಹ ಪರೀಕ್ಷೆ, ಕಣ್ಣಿನ ಪರೀಕ್ಷೆ, ಹೃದಯದ ಪರೀಕ್ಷೆ ಮತ್ತು ಅಂಗವಿಕಲರಿಗೆ ಉಚಿತವಾಗಿ ತಪಾಸಣೆಯನ್ನು ನಡೆಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 300 ರೈತರಿಗೆ ತಪಾಸಣೆಯನ್ನು ಮಾಡಲಾಯಿತು. ಇಂತಹ ಕಾರ್ಯಕ್ರಮಗಳು ವಿವಿಧ ಗ್ರಾಮದಲ್ಲಿ ನಡೆದರೆ ರೈತರ ಆರೋಗ್ಯವನ್ನು ಕಾಪಾಡುವುದರಿಂದ ಕಲ್ಯಾಣವಾಗುವುದಲ್ಲದೆ ಹೆಚ್ಚಿನ ಇಳುವರಿಯನ್ನು ಸಹ ಪಡೆಯಲು ಸಹಾಯವಾಗುತ್ತದೆ. ಗ್ರಾಮದ ವಿವಿಧ ರೈತರು, ರೈತ ಮುಖಂಡರು ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು ರೈತರ ಆರೋಗ್ಯದ ತಪಾಸಣೆಯ ಬಗ್ಗೆ ಪ್ರಶಂಸೆಯನ್ನು ವ್ಯಕ್ತಪಡಿಸಿದರು.





ಆಕಾಶವಾಣಿ ಕಾರ್ಯಕ್ರಮಗಳು

ಕ್ರ.ಸಂ.	ಶೀರ್ಷಿಕೆ	ದಿನಾಂಕ	ವಿಜ್ಞಾನಿಯ ಹೆಸರು
01	ಮುಂಗಾರು ಬೆಳೆಗಳಲ್ಲಿ ಪೀಡೆ ನಿರ್ವಹಣೆ	04.10.2017	ಶ್ರೀ. ಪಿ.ಆರ್. ಬದರಿಪ್ರಸಾದ್
02	2017 ರ ಕೃಷಿ ಮೇಳದಲ್ಲಿ ಪ್ರಾಣಿ ಶಾಸ್ತ್ರದ ಪ್ರದರ್ಶನ	10.12.2017	ಡಾ. ಪ್ರಹ್ಲಾದ್ ಉಘಾಳೆ

ದೂರದರ್ಶನ ಕಾರ್ಯಕ್ರಮಗಳು

ಕ್ರ.ಸಂ.	ಶೀರ್ಷಿಕೆ	ದಿನಾಂಕ	ವಿಜ್ಞಾನಿಯ ಹೆಸರು
01	ಸಮಗ್ರ ಕೃಷಿ ಪದ್ಧತಿಯಲ್ಲಿ ಕೀಟ ಪೀಡೆಗಳ ನಿರ್ವಹಣೆ	13.10.2017	ಶ್ರೀ. ಪಿ.ಆರ್. ಬದರಿಪ್ರಸಾದ್
02	ಜೀನು ಸಾಕಾಣಿಕೆ ಪದ್ಧತಿಗಳು	03.11.2017	ಶ್ರೀ. ಪಿ.ಆರ್. ಬದರಿಪ್ರಸಾದ್
03	ವಿಶ್ವ ಮಣ್ಣು ಆರೋಗ್ಯ ದಿನಾಚರಣೆಯ ಮಹತ್ವ	05.12.2017	ಶ್ರೀ. ಎಂ.ವಿ. ರವಿ
04	ದ್ರಾಕ್ಷಿಯಲ್ಲಿ ಹಿಟ್ಟುತಿಗಣೆಯ ಜೈವಿಕ ನಿಯಂತ್ರಣ	07.12.2017	ಶ್ರೀ. ಪಿ.ಆರ್. ಬದರಿಪ್ರಸಾದ್
05	ಅಣಬೆ ಉತ್ಪಾದನೆ	10.12.2017	ಡಾ. ಅನುಪಮಾ ಸಿ.

ಪ್ರಧಾನ ಸಂಪಾದಕರು : ಡಾ. ಎಂ. ವಿ. ರವಿ
ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥರು

ಸಂಪಾದಕರು : **ಡಾ. ಅನುಪಮ ಸಿ.** ವಿಜ್ಞಾನಿ (ಗೃಹ ವಿಜ್ಞಾನ)
ಶ್ರೀ ಬದರಿ ಪ್ರಸಾದ್ ಪಿ. ಆರ್. ವಿಜ್ಞಾನಿ (ಕೃಷಿ ಕೀಟ ಶಾಸ್ತ್ರ)
ಶ್ರೀಮತಿ ಶ್ವೇತಾ ಬಿ. ಎನ್. ವಿಜ್ಞಾನಿ (ಬೇಸಾಯ ಶಾಸ್ತ್ರ)
ಶ್ರೀಮತಿ ಕೆ.ಜೆ. ಹೇಮಲತಾ ವಿಜ್ಞಾನಿ (ತೋಟಗಾರಿಕೆ)

ಪುಟ ವಿನ್ಯಾಸ ಮತ್ತು ಅಕ್ಷರ ಜೋಡಣೆ :
ಶ್ರೀ. ದೇವರಾಜ್ ನಾಯಕ, ಕಾರ್ಯಕ್ರಮ ಸಹಾಯಕ (ಗಣಕಯಂತ್ರ) ಮತ್ತು **ಕುಮಾರಿ ಸುಮಂಗಳಮ್ಮ ಎಂ.**

ಇವರಿಂದ

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು
kvkraichur@gamil.com
kvk.Raichur@icar.gov.in
www.kvkraichur.com

ತೆರೆದ–ಅಂಚೆ

ಗೆ, _____

_____